# ಆಹಾ ಸುದ್ದಿ!

★ ಸಸಿತೋಟ



ರಷ್ಯಾದ ಮಾಜಿ ಪ್ರಾಣಿ ತರಬೇತುದಾರ ಅಲೆಕ್ಸಾಂಡರ್ ಸಾಕು ನಾಯಿ ಲೆಮನ್. ನೀರನ್ನು ಪಂಪ್ ಮಾಡುವುದರಿಂದ ಹಿಡಿದು ಆಲೂಗೆಡ್ಡೆ ಹೊಲವನ್ನು ಉಳುವ ಕೆಲಸದವರೆಗೂ ಈ ಲೆಮನ್ ಮಾಡುತ್ತದಂತೆ. ಸಹಾಯ ಹಸ್ತ ಎನ್ನುವ ಬದಲು ಸಹಾಯ ಪಾದ ಎನ್ನಲಡ್ಡಿಯಿಲ್ಲ.

ದಕ್ಷಿಣ ಆಫ್ರಿಕಾದಲ್ಲಿ ಬಾಡಿಗೆದಾರರು ಮನೆ ಖಾಲಿ ಮಾಡುವಾಗ ಲೈಂಗಿಕ ಆಟಿಕೆಗಳು, ತಮ್ಮದೇ ನಗ್ನ ಭಾವಚಿತ್ರ ಬಿಟ್ಟು ಹೋಗುತ್ತಾರೆ ಎಂದು ಅಲ್ಲಿಯ ಸಾವಿರಾರು ಮನೆಗಳ ಮಾಲೀಕರು ದೂರಿದ್ದಾರಂತೆ. ಅವರೇ ಅದೃಷ್ಟವಂತರು. ನಮ್ಮಲ್ಲಿ ಹೊಸ ಮನೆಗೆ ಬಂದಾಗ ಕೆಲವರು ಹಳೆಯ ಮನೆಯನ್ನು ಪೂರ್ತಿ ಖಾಲಿ ಮಾಡದೆ ಹಾಳಾದ ಪೊರಕೆ, ಹಳೆಬಟ್ಟೆ, ಹಳೆಯ ಚಪ್ಪಲಿ ಬಿಟ್ಟು ಬರುತ್ತಾರೆ.

ಬಾಡಿ ಪೇಂಟಿಂಗ್ ಹೊಸದೇನಲ್ಲ. ಆದರೆ ಅಟ್ಲಾಂಟಾದಲ್ಲಿ ನಡೆದ ಸ್ಪರ್ಧೆಯಲ್ಲಿ ಪ್ರದರ್ಶಿಸಿದ ಟ್ರೋಂಪ್ ಲೋಯಿಲ್ ಎಂಬ ಪೇಂಟಿಂಗ್ ಇದು. ಬಾಡಿ ಪೇಂಟಿಂಗ್ ಅನ್ನು ಹಿನ್ನೆಲೆಯಲ್ಲಿರುವ ಕಟ್ಟಡಗಳ ಜೊತೆ ಮಿಶ್ರ ಮಾಡಲಾಗಿದೆ. ನಾನು ಅದೋ ಅಥವಾ ಅದು ನಾನೋ ಎಂದು ಗೊಂದಲ ಮೂಡಿಸುವಂತಿದೆ.





ಚೀನಾದಲ್ಲಿ ಮಳಿಗೆಯೊಂದು ಚಿನ್ನದ ಹಾದಿಯನ್ನು ನಿರ್ಮಿಸಿದೆ. ತಲಾ ಒಂದು ಕೆಜಿ ತೂಕದ 606 ಚಿನ್ನದ ಗಟ್ಟಿಗಳನ್ನು ಬಳಸಿ ಈ ಮಾರ್ಗ ರೂಪಿಸಿದೆ. ಚಿನ್ನವೆಂದರೆ ಪಾದ ಧೂಳಿಗೆ ಸಮಾನ ಎನ್ನುವವರು ಇದರ ಮೇಲೆ ಓಡಾಡಿ ತಮ್ಮ ಮಾತಿಗೊಂದು ಚಿನ್ನದ ತೂಕ ಸೇರಿಸಬಹುದು.



ಹಳೆಯ ಪ್ರೇಮಿಯ ಗುಣಲಕ್ಷಣಗಳು ಬೇರೊಬ್ಬ ಪುರುಷನ ಮೂಲಕ ಪಡೆಯುವ ಮಕ್ಕಳಿಗೆ ಬಂದರೆ... ! ಬರುತ್ತವೆ ಎಂದು ಸಾಬೀತುಪಡಿಸಿದ್ದಾರಂತೆ ನ್ಯೂ ಸೌಥ್ ವೇಲ್ಸ್ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು. ಹಣ್ಣಿನ ನೊಣದ ಮರಿಯಲ್ಲಿ ಅದು ಹಿಂದೆ ಲೈಂಗಿಕ ಸಂಬಂಧ ಹೊಂದಿದ ಗಂಡು ನೊಣದ ಲಕ್ಷಣಗಳು ಬಂದಿವೆ ಎಂದು ಪ್ರಯೋಗದ ಮೂಲಕ ಸಾಬೀತು ಮಾಡಿದ್ದಾರಂತೆ. ಹಿಂದೆ ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್ ಈ ವಾದವನ್ನು ಪ್ರತಿಪಾದಿಸಿದ್ದು, ರಾಜ- ಮಹಾರಾಜರು ವಿಚ್ಛೇದಿತರನ್ನು ವಿವಾಹವಾಗಲು ಹಿಂದೇಟು ಹಾಕುತ್ತಿದ್ದರಂತೆ. ಪ್ರೀತಿ-ಪ್ರೇಮವನ್ನು ಮುಚ್ಚಿಡಲು ಸಾಧ್ಯವಿಲ್ಲ ಎಂಬುದನ್ನು ವಿಜ್ಞಾನಿಗಳೂ ಸಾಬೀತು ಮಾಡಬೇಕಾಯಿತು!

ಫುಕೆಟ್‌ನಲ್ಲಿ ನಡೆದ ಸಸ್ಯಾಹಾರಿ ವಾರದ ಆಚರಣೆಯಲ್ಲಿ ವ್ಯಕ್ತಿಯೊಬ್ಬ ಭಕ್ತಿಯ ಪರಾಕಾಷ್ಠೆಯಾಗಿ ತರಕಾರಿ- ಮಾಂಸ ಕತ್ತರಿಸುವ ಚಾಕುಗಳನ್ನೇ ಬಾಯಿ ಮೂಲಕ ತೂರಿಸಿಕೊಂಡ. ಒಂದು ವಾರ ಕಾಲ ಅಪ್ಪಟ ಸಸ್ಯಾಹಾರ ಸೇವಿಸುವ ಈ ಆಚರಣೆಯಲ್ಲಿ ರಕ್ತ ಸೋರಿಸುವ ಈ ಪರಿ ಏಕೋ?